# ಉಡುಪಿ ಜಿಲ್ಲೆಯ ಕರಾವಳಿ ಸಂಸ್ಕೃತಿ

## (ಕುಂದಾಪುರ ತಾಲೂಕಿನ ಉಲ್ಲೇಖದೊಂದಿಗೆ)

ಮಂಜುನಾಥ ಕೆ. ಎಸ್ ಕನ್ನಡ ಉಪನ್ಯಾಸಕರು
ಭಂಡಾರ್ಕಾರ್ಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಕುಂದಾಪುರ, ಉಡುಪಿ ಜಿಲ್ಲೆ

**ಪೀಠಿಕೆ:**

ಭಾರತದ, ದಕ್ಷಿಣ ರಾಜ್ಯ ಕರ್ನಾಟಕ, ಒಂದು ವಿಶಿಷ್ಟ ಕಲೆ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಕರ್ನಾಟಕ ರಾಜ್ಯ ತನ್ನ ದೀರ್ಘ ಇತಿಹಾಸ ಸೇರಿದಂತೆ ಸ್ಥಳಿಯ ವೈವಿಧ್ಯಮಯ ಭಾಷಾ ಮತ್ತು ಧಾರ್ಮಿಕ ಜನಾಂಗೀಯತೆ ರಾಜ್ಯದ ವಿವಿಧ ಸಾಂಸ್ಕೃತಿಕ ಪರಂಪರೆಗೆ ಅಪಾರವಾದ ಕೊಡುಗೆಯನ್ನು ನೀಡಿದೆ. ಇದಲ್ಲದೆ ಕರ್ನಾಟಕ ಕನ್ನಡಿಗರಿಗೆ, ತುಳು ಮಾತನಾಡುವವರಿಗೆ, ಕೊಡವರು ಮತ್ತು ಕೊಂಕಣಿಗಳ ನೆಲೆಯಾಗಿದೆ ಮತ್ತು ಅವರು ತಮ್ಮನ್ನು ಕನ್ನಡಿಗರೆಂದೇ ಪರಿಗಣಿಸುತ್ತಾರೆ. ಟಿಬೆಟಿಯನ್ ಬೌದ್ಧರು ಮತ್ತು ಸಿದ್ಧಿ ಬುಡಕಟ್ಟು ಮತ್ತು ಕೆಲವು ಜನಾಂಗೀಯ ಗುಂಪುಗಳ ಅಲ್ಪಸಂಖ್ಯಾತ ಜನಸಂಖ್ಯೆ ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿನ ಸಾಂಪ್ರದಾಯಿಕ ಜಾನಪದ ಕಲೆ, ಸಂಗೀತ, ನೃತ್ಯ, ನಾಟಕ, ಕಥೆ ಹೇಳುವ ಸಂಚಾರೀ ತಂಡಗಳು ಇತ್ಯಾದಿಗಳನ್ನೂ ಕೂಡಿದೆ. ಯಕ್ಷಗಾನ ಒಂದು ಶಾಸ್ತ್ರೀಯ ಜಾನಪದದ ಪ್ರಮುಖ ನಾಟಕೀಯ ರೂಪಗಳಲ್ಲಿ ಒಂದಾಗಿದೆ. ಇದು ಒಂದು ಪೂರ್ಣ ಪ್ರಮಾಣದ ವೈವಿಧ್ಯಮಯ ಕಲೆಗಳನ್ನೊಳಗೊಂಡ ಕರಾವಳಿ ಕರ್ನಾಟಕದ ಕಲೆಯಾಗಿದೆ.

ಸಂಸ್ಕೃತಿ ಎಂಬುದು ಬೇರೆ ಪ್ರಾಣಿವರ್ಗಗಳಿಲ್ಲದ,ಮಾನವ ವರ್ಗಕ್ಕೆ ಮಾತ್ರ ಸೀಮಿತವಾಗಿರುವ ವಿಶಿಷ್ಟ ಸ್ವರೂಪ. ಸಂಸ್ಕೃತಿಯಲ್ಲಿ 1)ಆದಿವಾಸಿ ಸಂಸ್ಕೃತಿ 2)ಗ್ರಾಮೀಣ ಸಂಸ್ಕೃತಿ3)ನಗರಸಂಸ್ಕೃತಿ ಎಂದು ಗುರುತಿಸುವುದಾದರೆ ಆದಿವಾಸಿ ಸಂಸ್ಕೃತಿಯ ಕೆಲವು ಅಂಶಗಳನ್ನು ರೂಢಿಸಿಕೊಂಡು ಮಾಧ್ಯಮ ಸ್ಥಿತಿಯಲ್ಲಿರುವ ಗ್ರಾಮೀಣ ಸಂಸ್ಕೃತಿಯನ್ನು ಜನಪದ ಸಂಸ್ಕೃತಿಎಂದು ಗುರುತಿಸಬಹುದಾಗಿದೆ.ಗ್ರಾಮೀಣ ಸಂಸ್ಕೃತಿ ಮತ್ತು ನಗರಸಂಸ್ಕೃತಿಯನ್ನು ಶಿಷ್ಟ ಸಂಸ್ಕೃತಿಯ ಅಡಿಯಲ್ಲಿ ಅಧ್ಯಯನ ಮಾಡಬಹುದು. ಜನಪದ ಸಂಸ್ಕೃತಿಯನ್ನು

**1)ಮೌಖಿಕ ಸಂಸ್ಕೃತಿ**

**2)ಭೌತಿಕಸಂಸ್ಕೃತಿ**

**3)ಪ್ರದರ್ಶನ ಕಲೆಗಳು ಮತ್ತು ಮಕ್ಕಳಾಡುವ ಆಟಗಳು**

**4) ಆಚರಣೆಗಳು ಮತ್ತು ನಂಬಿಕೆಗಳು**

ಈ ರೀತಿ ವಿಭಜನೆ ಮಾಡಿಕೊಂಡು ಅಧ್ಯಯನ ಮಾಡಬಹುದು.ಫೋಕ್ ಅಂದರೆ ಜನರ ಗುಂಪು ಎಂದರ್ಥ.ಒಂದು ಗುಂಪು ಒಂದು ವಿಚಾರವನ್ನು ಸಮಾನವಾಗಿ ಹಂಚಿಕೊಳ್ಳುವುದು.ಅದು ಮುಂದೆ ಸಂಸ್ಕೃತಿಯಾಗಿ ಬೆಳೆಯುತ್ತದೆ.ಕರ್ನಾಟಕದ ಕರಾವಳಿ ಎಂದರೆ ಮಂಗಳೂರಿನಿಂದ ಕಾರವಾರದವರೆಗೆ ಚಾಚಿಕೊಂಡಿದೆ.ಇಂತಹ ದೊಡ್ಡ ವ್ಯಾಪ್ತಿಯನ್ನು ಬಿಟ್ಟು ಇಲ್ಲಿ ಉಡುಪಿ ಜಿಲ್ಲೆಯ ಕರಾವಳಿ ಸಂಸ್ಕೃತಿಯನ್ನು ವಿವರಿಸುವುದನ್ನು ಮಾಡುತ್ತಿದ್ದೇನೆ.ಉಡುಪಿ ಜಿಲ್ಲೆಯ ಕರಾವಳಿ ಎಂದರೆ ಮಲ್ಪೆಯಿಂದ ಬೈಂದೂರು–ಶಿರೂರಿನವರೆಗೆ ವ್ಯಾಪಿಸುತ್ತದೆ.ನೈಸರ್ಗಿಕವಾಗಿ ಪೂರ್ವದಲ್ಲಿ

ಅರಬಿ ಸಮುದ್ರ ಮತ್ತು ಪಶ್ಚಿಮದಲ್ಲಿ ಪಶ್ಚಿಮಘಟ್ಟ ಸುತ್ತುವರಿದ ಆಕರ್ಷಕವಾದ ತಾಣವಾಗಿದೆ.ಫಲವತ್ತಾದ ಮಣ್ಣು,ಸಸ್ಯವರ್ಗ,ಹೆಚ್ಚು ಮಳೆ,ಕಡಲು,ಪರ್ವತದ ಸಾಲು,ಪುರಾತನ ದೇವಾಲಯ ಮುಂತಾದವುಗಳಿಂದ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ.ಅವುಗಳನ್ನು ಒಂದಾಂದಾಗಿ ವಿವರಿಸಲು ಇಷ್ಟ ಪಡುತ್ತೇನೆ.

**ಯಕ್ಷಗಾನ:** ಉಡುಪಿ ಜಿಲ್ಲೆಯ ಯಕ್ಷಗಾನವು ಜನಪದ ಕಲೆಯಾಗಿದ್ದರೂ ಕೂಡ ಈಗ ಶಿಷ್ಟ ಮತ್ತು ಜನಪದ ಅಂಶಗಳ್ನು ರೂಢಿಸಿಕೊಂಡು ಬಂದಿರುವ ಪ್ರಸಿದ್ಧ ಕಲೆಯಾಗಿದೆ.ತನ್ನದೇ ಆಗಿರುವ ಪ್ರಾಚೀನ ಇತಿಹಾಸವನ್ನು ಹೊಂದಿರುವ ಆರಾಧನಾ ಕಲೆಯಾಗಿದೆ.ಯಕ್ಷಗಾನವು ನೃತ್ಯ,ಸಂಗೀತ,ಸಂಗೀತ,ಸಂಭಾಷಣೆ,ವೇಷಭೂಷಣ,ಪ್ರಸಾಧನ ಮತ್ತು ರಂಗು ರಂಗಿನ ರಂಗಸ್ಥಳದ ವಿನ್ಯಾಸ ಶೈಲಿಯನ್ನು ಹೊಂದಿರುತ್ತದೆ.ಸಾಂಪ್ರದಾಯಿಕ ನೃತ್ಯ ಶೈಲಿಯನ್ನು ಹೊಂದಿರುತ್ತದೆ.ಗಣಪತಿ ಪೂಜೆಯಾದ ನಂತರ ಮುಸ್ಸಂಜೆಯಿಂದ ಮುಂಜಾನೆಯವರೆಗೆ ರಂಗಸ್ಥಳದಲ್ಲಿ ಪ್ರಸ್ತುತಗೊಳ್ಳುತ್ತದೆ.

**ಚಿಕ್ಕಮೇಳ:**ಯಕ್ಷಗಾನ ಮೇಳಗಳ ಬಿಡುವಿನ ದಿನಗಳಲ್ಲಿ ರಾತ್ರಿಯ ಹೊತ್ತಿನಲ್ಲಿ ಮನೆ ಮನೆಗಳಿಗೆ ಗಣಪತಿ ಮೂರ್ತಿ ಅಥವಾ ಯಕ್ಷಗಾನ ಮೇಳದ ಕ್ಷೇತ್ರದ ದೇವರ ಮೂರ್ತಿಯನ್ನು ತಂದು ಮನೆಯ ಒಳಗೆ ಇರಿಸಿ ಪೂಜಿಸಿದ ಬಳಿಕ ಯಕ್ಷಗಾನದ ಪ್ರಸಂಗದ ಸಣ್ಣ ಸನ್ನಿವೇಶದ ಪದ್ಯಗಳನ್ನು ಹಾಡಿ ಅದಕ್ಕೆ ಅರ್ಥವನ್ನು ಹೇಳುತ್ತಾರೆ.ಈ ಕಲೆಯಲ್ಲಿ ಭಾಗವತ,ಇಬ್ಬರು ವೇಷದಾರಿಗಳು,ಮದ್ದಲೆ,ಶ್ರುತಿ ಪೆಟ್ಟಗೆ,ಪರಿಕರಗಳನ್ನು ಹಿಡಿದುಕೊಳ್ಳುವ ವ್ಯಕ್ತಿಯೊಬ್ಬ ಇರುತ್ತಾನೆ.ಇದು ಮಳೆಗಾಲದಲ್ಲಿ ಕಲಾವಿದರ ಉದರ ನಿಮಿತ್ತವೂ ಆಗಿರುತ್ತದೆ.

**ತಾಳ ಮದ್ದಲೆ:**ಈ ಕಲೆಯು ಯಕ್ಷಗಾನದ ಒಂದು ಪ್ರಕಾರವಾಗಿದೆ.ಈ ಕಲೆಗೆ ಮಾತೇ ಬಂಡವಾಳವಾಗಿದೆ.ಭಾಗವತರು ಹಾಡಿದಂತಹ ಪದ್ಯಗಳ ವಾಕ್ಯಾರ್ಥ,ಸೂಚ್ಯಾರ್ಥ,ಔಚಿತ್ಯ ಪ್ರಧಾನವಾಗಿ ಇಬ್ಬರು ಪಾತ್ರಧಾರಿಗಳು ಬಹಳಷ್ಟು ತರ್ಕದೊಂದಿಗೆ ಕಥೆ ಮುಂದುವರಿಯುತ್ತದೆ.ಇಲ್ಲಿ ಪುರಾಣಗಳ ಅನಾವರಣಗೊಳ್ಳುತ್ತದೆ.ಒಂದು ತಾಳಮದ್ದಲೆಗೆ ಮೂವತ್ತು ನಿಮಿಷದಿಂದ ಒಂದೂವರೆ ಗಂಟೆಯವರೆಗೆ ನಡೆಯುತ್ತದೆ.ವರ್ಷವಿಡೀ ಈ ತಾಳಮದ್ದಲೆಯನ್ನು ನಡೆಸುತ್ತಾರೆ.

**ಹೂವಿನ ಕೋಲು:**ತಾಳ ಮದ್ದಲೆಯಂತೆ ಬೆಳೆಸಿಕೊಂಡು ಬಂದ ಕಲೆಯಾಗಿದೆ.ಆದರೆ ಹತ್ತು-ಹದಿನೈದು ನಿಮಿಷದಲ್ಲೇ ಮುಗಿಯುತ್ತದೆ.ಹೂವಿನ ಕೋಲು ನವರಾತ್ರಿಯಲ್ಲಿ ಮಾತ್ರ ನಡೆಯುತ್ತದೆ.ಶಾಲಾ ಮಕ್ಕಳಿಂದ ಈ ಪ್ರದರ್ಶನವನ್ನು ಮಾಡಿಸುತ್ತಾರೆ.ಮಕ್ಕಳ ಭಾಷಾ ಶುದ್ಧಿಯಾಗುತ್ತದೆ.ಜ್ಞಾಪಕ ಶಕ್ತಿಯ ಸಂವರ್ಧನೆಯಾಗುತ್ತದೆ.ಇಬ್ಬರು ಹುಡುಗರು ಸಮವಸ್ತ್ರ ಧರಿಸಿ ತಲೆಗೆ ಬಿಳಿಯ ಟೋಪಿಯನ್ನು ಧರಿಸಿಕೊಂಡು ಅರ್ಥಧಾರಿಗಳಾಗಿರುತ್ತಾರೆ.ಚಂಡೆಯ ವಾದನವಿರುವುದಿಲ್ಲ.ಈ ಕಲೆಯಿಂದ ಪ್ರಯೋಜನವೇನೆಂದರೆ ಇದರಲ್ಲಿ ಭಾಗವಹಿಸಿದ ಮಕ್ಕಳಿಗೆ ತಾಳ,ಲಯ,ರಾಗದ ಜ್ಞಾನ ಉಂಟಾಗಿ ಯಕ್ಷಗಾನಕ್ಕೆ ಪ್ರವೇಶ ಸುಲಭ ಸಾಧ್ಯವಾಗುತ್ತದೆ.

**ಯಕ್ಷಗಾನ ಗೊಂಬೆಯಾಟ:**ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೇವಣ್ಣ,ಕೊಗ್ಗಪ್ಪ,ಭಾಸ್ಕರ ಕಾಮತ್ ಈಗ ಈ ಕಲೆ ಕೂಡ ಯಕ್ಷಗಾನದ ಒಂದು ಪ್ರಕಾರವೆಂದರೆ ತಪ್ಪಾಗಲಿಕ್ಕಿಲ್ಲ.ಇದರ ಮೂಲ ಉಪ್ಪಿನ ಕದ್ರು ಕೊಗ್ಗ ಕಾಮತರು.ಇವರು ಈ ಕಲೆಯನ್ನು ಹುಟ್ಟು ಹಾಕಿ ದೇಶವಿದೇಶದಲ್ಲಿ ಪ್ರದರ್ಶನವನ್ನು ನೀಡಿರುತ್ತಾರೆ.ಇವರಿಗೆ ಜನಪದ ರಂಗ ಭೂಮಿಯ ಮೊದಲ ಪ್ರಶಸ್ತಿಯು ಸಂದಿರುತ್ತದೆ.ಈ ಕಲೆಯಲ್ಲಿ ಗೊಂಬೆ ಆಡಿಸುವವರು ಕಾಣಿಸದ ಹಾಗೆ ಒಂದು ವೇದಿಕೆಯನ್ನು ನಿರ್ಮಿಸಿಕೊಂಡಿರುತ್ತಾರೆ.ಪ್ರಸಂಗದ ಪದ್ಯದ ಧ್ವನಿ ಮುದ್ರಣ ಸಂಗ್ರಹವನ್ನು ಬಳಸಿ ಈ ಗೊಂಬೆಯಾಟವನ್ನು ಮಾಡುತ್ತಾರೆ.ಯಕ್ಷಗಾನ ತಿಳಿದವರು ಮಾತ್ರ ಗೊಂಬೆಯನ್ನು ಕುಣಿಸಬಲ್ಲರು.ಅವರು ವಿಶೇಷವಾದ ತರಬೇತಿಯನ್ನು ಪಡೆದುಕೊಂಡಿರುತ್ತದೆ.

**ಕಂಬಳ:**ಇದೊಂದು ಜನಪದ ಕ್ರೀಡೆ.ಹಗ್ಗದ ಓಟ,ಹಲಗೆಯ ಓಟ ಎನ್ನುವ ವಿಧಗಳಿವೆ.ಈ ಉಡುಪಿ ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧ ವಂಡಾರು,ಯಡ್ತಾಡಿ,ಹಂದಾಡಿ,ಮಣೂರು,ತಲ್ಲೂರು,ನೀಲಾವರ,ಯಡ್ತರೆ,ಕಟಪಾಡಿ,ಅಲ್ತಾರು,ಮಿಯಾರು,ಬಾರಾಡಿ ಬೀಡು,ತೋನ್ಸೆ ಮುಂತಾದ ಕಡೆಗಳಲ್ಲಿ ಕಂಬಳ ನಡೆಯುತ್ತದೆ.ಕಂಪ+ಪೊಲ=ಕಂಬುಲವಾಗಿದೆ.ಚೆನ್ನಾಗಿ ಓಡಿದ

ಕಂಬಳಗಳಿಗೆ ಬಹುಮಾನವಾಗಿ ಹಿಂದೆ ತೆಂಗಿನ ಕಾಯಿ ನೀಡಲಾಗುತ್ತಿತ್ತು.ಕೋಣಗಳ ಜೊತೆಗೆ ಡೋಲು–ಚಂಡೆಗಳ ಜೊತೆಗೆ ನಡೆದು ಕುಣಿದು ಹೋಗುವ ಚಂದವೇ ಬೇರೆ.

**ಹೊಸ್ತು:**ಕರಾವಳಿ ತೀರವು ಮಾನ್ಸೂನ್ ಮಾರುತ ಅವಲಂಬಿಸಿ ವ್ಯವಸಾಯ ಮಾಡುತ್ತದೆ.ಇಲ್ಲಿಯ ಪ್ರಮುಖ ಬೆಳೆ ಬತ್ತ.ಇಳುವರಿಯು ಸೆಪ್ಟೆಂಬರ್ ಅಕ್ಟೋಬರ್ ನಲ್ಲಿ ಪಡೆಯುತ್ತೇವೆ.ದವಸ–ಧಾನ್ಯವನ್ನು ಲಕ್ಷ್ಮಿ ಎನ್ನುವ ಹಿನ್ನೆಲೆಯಲ್ಲಿ .ಭಕ್ತಿಯಿಂದ ಬರಮಾಡಿಕೊಳ್ಳುತ್ತಾರೆ.ಈ ಮಣ್ಣಿಗೆ ಮತ್ತು ಫಸಲಿಗೆ ಗೌರವ ಮತ್ತು ಧನ್ಯ ಭಾವವನ್ನು ಸ್ವಾಗತದ ಮೂಲಕ ಸೂಚಿಸುವ ಸಾಂಕೇತಿಕವಾದ ಹಬ್ಬವೇ ಹೊಸ್ತು.ಚೌತಿ ಕಳೆದ ಬಳಿಕ ಹೊಸ್ತನ್ನು ಆಚರಿಸುತ್ತಾರೆ.ಪ್ರಕೃತಿಯುಹಸಿರು ಹೊದ್ದು ಚಿಗುರು ತೆನೆ ಒಡೆದು ಫಸಲುಕೊಡುವ ಸನ್ನಹದಲ್ಲಿದ್ದಾಗ ಬೆಳೆದ ಬೆಳೆಗಾರರು ಸಂಭ್ರಮವನ್ನು ತಾಳಿ ಹಬ್ಬವನ್ನು ಆಚರಿಸುತ್ತಾರೆ.ಬಗೆ ಬಗೆಯ ಭಕ್ಷ್ಯೆಯನ್ನು ಮಾಡಿಕೊಂಡು ಮದುಮಕ್ಕಳು,ನಂಟರು ಈ ಹೊಸ್ತಿನ ಊಟದಲ್ಲಿ ಸಂಭ್ರಮಿಸುತ್ತಾರೆ.

**ಹೋಳಿ ಹಬ್ಬ:**ಭೋಗ ಸಮಾಧಿಯಲ್ಲಿರುವ ಶಿವನಿಗೆ ಮನ್ಮಥನು ಹೂ ಬಾಣಗಳಿಂದ ಹೊಡೆದು ಸಮಾಧಿಯಿಂದ ಎಚ್ಚರಿಸುತ್ತಾನೆ.ಇದರಿಂದ ಕೋಪಗೊಂಡ ಶಿವನು ತನ್ನ ಮೂರನೆಯ ಕಣ್ಣನ್ನು ತೆರೆದು ಮನ್ಮಥನನ್ನು ಸುಡುತ್ತಾನೆ.ಪತಿಯನ್ನು ಕಳೆದುಕೊಂಡ ರತಿದೇವಿಯು ಶಿವನಲ್ಲಿ ದುಃಖಿಸುತ್ತಾಳೆ.ಆಗ ಪರಶಿವನು ಮನ್ಮಥನು ಪತ್ನಿಗೆ ಮಾತ್ರ ಶಾರೀರಿಯಾಗುವಂತೆ ವರಕೊಡುತ್ತಾನೆ.ಈ ಘಟನೆಯು ಶುದ್ಧ ಪೂರ್ಣಿಮೆಯಂದು ನಡೆದಿರುವ ಕಾರಣ ಆ ದಿನವನ್ನು ಕಾಮನ ಹುಣ್ಣಿಮೆ ಎಂದು ಆಚರಿಸಲಾಗುತ್ತದೆ.ಈ ಹಬ್ಬವನ್ನು ಮುಖ್ಯವಾಗಿ ಇಲ್ಲಿಯ ಕೊಂಕಣ ಖಾರ್ವಿ ಮತ್ತು ಕುಡುಬಿ ಜನಾಂಗದವರು ಆಚರಿಸುತ್ತಾರೆ.ಪಂಗೋಡ್ ಎಂಬುದಾಗಿ ಒಂದೊಂದು ಗುಂಪು ಮಾಡಿಕೊಂಡು ನಿಶ್ಚಿತವಾದ ದೇವಾಲಯದಿಂದ ಕೊನೆಗೆ ಮೈದಾನ ಅಥವಾ ಗದ್ದೆಯಲ್ಲಿ ಗಡೆ ಬರುತ್ತಾರೆ.ಈ ಹಬ್ಬದಲ್ಲಿ ಹೆಂಗಸರು ಮಕ್ಕಳು ಗಂಡಸರು ಪಾಲ್ಗೊಳ್ಳುತ್ತಾರೆ.ಕೆಲವರಲ್ಲಿ ಆವೇಷಗಳು ಕೂಡ ಆಗುತ್ತದೆ.

**ನಾಗಮಂಡಲ ಮತ್ತು ಢಕ್ಕೆ ಬಲಿಗಳು:**ಕರಾವಳಿಯಲ್ಲಿ ಮೊದಲು ನಾಗ ಜನಾಂಗದವರು ವಾಸಿಸುತ್ತಿದ್ದರು.ಅವರಲ್ಲಿ ಸರ್ಪಆರಾಧನೆ ಇತ್ತು.ಈಗಲೂ ನಾಗನನ್ನು ಪೂಜಿಸುವ ಜನಾಂಗದವರು ಇದ್ದಾರೆ.ಸರ್ಪಕೋಲಗಳು ನಡೆಯುತ್ತದೆ.ನಾಗಮಂಡಲ\ಢಕ್ಕೆಬಲಿಗಳು ಆರಾಧನಾ ಪದ್ಧತಿಗಳಾದರೂ ಇದು ಒಂದು ಪ್ರದರ್ಶನ ಕಲೆಯೆಂದು ಗುರುತಿಸಬಹುದು.ನಾಗನ ನರ್ತನ ಮತ್ತು ನಾಗಪಾತ್ರಿಯ ಜೊತೆಗಿರುವ ಅರ್ಧನಾರೀಶ್ವರ ವೇಷಧಾರಿಯ ಭಾವವು ಕಲಾ ಸ್ವರೂಪದ್ದಾಗಿದೆ.ಇಲ್ಲಿ ನಾಗನು ಪ್ರಕೃತಿಯಾದರೆ ಅರ್ಧನಾರೀಶ್ವರ ವೇಷಧಾರಿಯು ಪುರುಷನನ್ನು ಸಂಕೇತಿಸುತ್ತಾರೆ.ಈ ನಾಗಮಂಡಲ ಅವೈದಿಕರಿಗೆ ಸಂಬಂಧಿಸಿದ ಆಚರಣೆಗಳಾದರೂ ಅದನ್ನು ವೈದಿಕ ವಿಧಿ–ವಿಧಾನದಲ್ಲಿ ಮೆರುಗು ಪಡೆದಿದೆ.

**ಢಕ್ಕೆ ಬಲಿ:** ಕರಾವಳಿಯ ಹೈಗುಳಿ,ಚಿಕ್ಕು,ಹಳೆಯಮ್ಮ,ಸ್ವಾಮಿ ಮನೆಯಲ್ಲಿ ರಾತ್ರಿ ಹೊತ್ತಿನಲ್ಲಿ ದೈವದ ಚಿತ್ತಾರವನ್ನು ಬಿಡಿಸಿ ಢಕ್ಕೆಯನ್ನು ಬಡಿಯುತ್ತಾ ಹಾಡಿ ಕುಣಿದು ನಡೆಸುವ ಉಪಚಾರ ಪೂರ್ವದಲ್ಲಿತ್ತು.ಹಿಂದೆ ಇದನ್ನು ಪಾಣಾರ ಜನಾಂಗದವರು ನಡೆಸಿಕೊಡುತ್ತಿದ್ದರೆನ್ನುವ ಕುರಿತು ವಿದ್ವಾಂಸರು ತಿಳಿಸುತ್ತಾರೆ.ಈಗ ಸಂಪೂರ್ಣ ವೈದಿಕರ ಆಚರಣೆಯಾಗಿದೆ.ಅದನ್ನು,ಈಗ ನಾಗಮಂಡಲದ ಸಂಕ್ಷೇಪ ರೂಪವೆಂದು ಕರೆಯಲಾಗುತ್ತಿದೆ.

**ಮಾರಿ ಪೂಜೆ:** ಶಕ್ತಿದೇವತೆಯ ಆರಾಧನೆಯು ಇಲ್ಲಿ ನಡೆಯುತ್ತದೆ.ದಿನನಿತ್ಯ ಇಲ್ಲದಿದ್ದರೂ ತಿಂಗಳಿಗೊಮ್ಮೆ ಸಂಕ್ರಾಂತಿಗೆ ಅಥವಾ ವರ್ಷಕ್ಕೊಮ್ಮೆ ಭೋಗವನ್ನು ನೀಡುತ್ತಾರೆ.ಹಾಗೆಯೇ ಮಾರಿಕಾಂಬೆಯ ಜಾತ್ರೆಯೂ ಕೂಡ ಕುಂದಾಪುರ ತಾಲೋಕಿನಾದ್ಯಂತ ನಡೆಯುತ್ತದೆ.ಪ್ರಯುಕ್ತ ಪ್ರತಿ ವರ್ಷ ಇಲ್ಲಿ ಮಾರಿಯನ್ನು ಹೊಡೆಯುತ್ತಾರೆ.ಅದರಲ್ಲಿ ಕಂಡ್ಲೂರು ಮಾರಿ ಜಾತ್ರೆ ತುಂಬಾ ದೊಡ್ಡ ಜಾತ್ರೆ.ಪ್ರತಿ ಊರಿನಲ್ಲೂ ಇದರ ಆಚರಣೆ ಇದೆ.ಕೆಲವೊಮ್ಮೆ ದೊಡ್ಡ ದೊಡ್ಡ ದೇವಾಲಯದ ನೆರಳಲ್ಲಿರುವ ಊರಿನಲ್ಲಿ ಆಚರಿಸುವುದಿಲ್ಲ.ಮಾರಿಗುಡಿಯಿಂದ ಮಾರಿಯನ್ನು ಹೊಡೆದುಕೊಂಡು ಕೂಗುತ್ತಾ ನಿಶ್ಚಿತ ಗಡಿಗಳಲ್ಲಿ ಬಲಿ ನೀಡುತ್ತಾ ಊರಿನ ಕೊನೆಯ ಗಡಿ ತಲುಪುತ್ತಾರೆ.ಅದು ರಾತ್ರಿ ಹನ್ನೆರಡು ಆಗಬಹುದು ಅಥವಾ ಬೆಳಗಿನ ಮೂರು ಗಂಟೆ ಕೂಡ ಆಗಬಹುದು. ಹೂವಿನ ಹಾರ ಧರಿಸಿದ ಪಾತ್ರಿ,ಊರಿನ ಜನರು ಸೇರಿ ನಿಶ್ಚಿತ ಸ್ಥಳದಲ್ಲಿ ಬಲಿ ನೀಡುತ್ತಾರೆ.ಚರು ಅಂದರೆ ದೊಡ್ಡ ಗಾತ್ರದ ಪಾತ್ರೆಯಲ್ಲಿ ಅನ್ನ,ಮರ್ಣನ್ ಎಲೆ,ಹಾನ ಡೋಲು,ಚಂಡೆ,ತಾಳದ ಜೊತೆಗೆ

ಸಾಗುತ್ತಾರೆ.ಪ್ರಾಣಿ ಬಲಿ ಬದಲಿಗೆ ಕೋಳಿ ಬಲಿಯನ್ನು ನೀಡುತ್ತಾರೆ.ಇಲ್ಲಿ ಧರ್ಮ ಜಾತಿ ತಾರತಮ್ಯಗಲು ಇರುವುದಿಲ್ಲ.ಮಾರಿ ಒಂದು ವಾರ ಇರುವಾಗಲೇ ಮಾರಿ ಪೂಜೆಗೆ ಬೇಕಾಗುವ ಅಕ್ಕಿ,ಕಾಯಿ,ನಿಗದಿ ಪಡಿಸಿರುವ ಹಣವನ್ನು ಮನೆ ಮನೆಗೆ ಬಂದು ಮಾರಿ ಸಮಿತಿಯವರು ಬಂದು ಪಡಿದುಕೊಂಡು ಹೋಗುತ್ತಾರೆ.

**ದೀಪಾವಳಿ:**ದೀಪಾವಳಿ ಮೊದಲ ದಿನ ನೀರು ತುಂಬುವುದು,ಮರುದಿನ ನರಕ ಚತುರ್ದಶಿ ಬೂದು ನೀರು ಸ್ನಾನ ಮಾಡುವುದು ಅದೇ ದಿನ ಅಮವಾಸ್ಯೆ ಆಗಿದ್ದರೆ ಅದೇ ದಿನ ಗದ್ದೆಗೆ ದೀಪ ಇಡುವುದು ಮತ್ತು ಬಳಿಕ ತುಳಸಿ ಪೂಜೆ ಮಾಡುವುದು. ನಾಲ್ಕನೆ ದಿನ ಬಲಿ ಪಾಡ್ಯಮಿ ಗೋ ಪೂಜೆ ಇವೆಲ್ಲವೂ ತಿಥಿಯನ್ನು ಅನುಸರಿಸಿಕೊಂಡಿರುತ್ತದೆ.ಒಟ್ಟು ನಾಲ್ಕು ದಿನ ಹಬ್ಬವಾಗಿ ಆಚರಿಸುತ್ತಾರೆ.ಆದರೆ ಕೆಲವೊಮ್ಮೆ ಎಲ್ಲಾ ಹಬ್ಬ ಒಂದೇ ದಿನ ಬರುತ್ತದೆ.ಮಾನವನ ಪ್ರೀತಿಯ ಸಂಬಂಧ ಕೇವಲ ಮನುಷ್ಯನಿಗೆ ಮಾತ್ರವಲ್ಲ ಪ್ರಾಣಿ ಮತ್ತು ಸಸ್ಯ ಪ್ರಪಂಚಕ್ಕೂ ವಿಸ್ತರಣೆಯಾಗುವುದು ಈ ಹಬ್ಬದ ಮೂಲಕ ತಿಳಿಯುತ್ತದೆ.ಗೋ ಪೂಜೆಯನ್ನು ಬೇರೆ ಬೇರೆ ಕಡೆ ಬೇರೆ ಬೇರೆ ದಿನ ಆಚರಿಸುತ್ತಾರೆ.ದೀಪಾವಳಿಯ ದಿನ ಬಲಿ ಚಕ್ರವರ್ತಿ ಪಾತಾಳದಿಂದ ಭೂಮಿಗೆ ಬರುತ್ತಾನೆನ್ನುವ ನಂಬಿಕೆ ಇದ್ದರೆ ಕೇರಳದಲ್ಲಿ ಓಣಂನಲ್ಲಿ ಈ ಹಬ್ಬವನ್ನು ಆಚರಿಸಲಾಗುತ್ತದೆ.

**ಹೊಸ್ತಿಲ ಪೂಜೆ (ಹೊಸ್ತಿಲಜ್ಜಿ):**ಮುತ್ತೈದೆಯರು ತಮಗೆ ಒಳ್ಳೆಯದು ಮಾಡಲಿ ಎಂದು ಇಡೀ ಕುಟುಂಬಕ್ಕೆ ಒಳ್ಳೆಯದು ಮಾಡಲಿಯೆಂದು ಮುತ್ತೈದೆಯರು ಈ ಪೂಜೆಯನ್ನು ಮಾಡುತ್ತಾರೆ.ನಡುಮನೆಯ ಮತ್ತು ಪ್ರವೇಶದ್ವಾರದ ಹೊಸ್ತಿಲನ್ನು ಸ್ವಚ್ಛಗೊಳಿಸಿ ಜೇಡಿ ಮಣ್ಣಿನ ಉಂಡೆಯಿಂದ ಹೊಸ್ತಿಲಿಗೆ ಚಿತ್ತಾರ ಬಿಡಿಸಿ,ಅರಸಿನ ಕುಂಕುಮದಿಂದ ಸಿಂಗಾರ ಮಾಡುತ್ತಾರೆ.ಹುರುಳಿಯ ಬೀಜವನ್ನು ಗಾಳಿತಾಗದ ಹಾಗೆ ಮಡಿಕೆಯಲ್ಲಿ ಮುಚ್ಚಿಟ್ಟು ಗಿಡಮಾಡಿ ಅದನ್ನು ಹೊಸ್ತಿಲ ಪೂಜೆಗೆ ಬಳಸುತ್ತಾರೆ.ಅದರ ಜೊತೆಗೆ ನೀರ್ಕಡ್ಡಿ (ಸೋಣೆ ಹೂ)ಗಿಡ ರಥದ ಹೂ,ಹುದ್ದೋಳ್ ಹೂವಿನಿಂದ ಪೂಜಿಸುತ್ತಾ ಅನುಕೂಲವಿರುವ ಬೆಸ ಸಂಖ್ಯೆಯ ದಿನವನ್ನು ಆಯ್ಕೆ ಮಾಡಿಕೊಂಡು ಅಜ್ಜಿಯನ್ನು ಓಡಿಸುವ ಅಜ್ಜಿ ಆಚರಣೆಯನ್ನು ಮಾಡುತ್ತಾರೆ.ಇದು ನಮ್ಮಲ್ಲಿರುವ ಜಡತ್ವವನ್ನು ಹೊಡೆದೋಡಿಸಿ ಮುಂದಿ ಎಲ್ಲಾ ಕಾರ್ಯಕ್ರಮವೂ ಸುಗಮವಾಗಿ ಸಾಗಬೇಕೆನ್ನುವುದು ಈ ಹಬ್ಬದ ಸಾಂಕೇತಿಕವಾಗಿದೆ.ಈ ಹೊಸ್ತಿಲಜ್ಜಿಯನ್ನು ಚೌತಿಯನ್ನು ಮುನ್ನವೇ ಮಾಡಬೇಕು.ವೇಷಧಾರಿಯಾಗಿ ಗುಮ್ಟೆ ಹಿಡಿದು ನರ್ತನವನ್ನು ಮಾಡುತ್ತಾರೆ.ಹಟ್ಟಿ ಮುದ್ದ ಎನ್ನುವ ಹಕ್ಕಿಯ ಬಿಳಿ,ಕೆಂಪು,ಹಳದಿ ಬಣ್ಣದ ಹಕ್ಕಿಯ ಬಾಲವನ್ನು ಈ ಹಬ್ಬದಲ್ಲಿ ಅತೀ ಮುಖ್ಯವಾದ ಮತ್ತು ವಿಶೇಷವಾದ ತೊಡುಗೆ ಯಾಗಿರುತ್ತದೆ.

**ಹುಲಿವೇಷ:**ಕರಾವಳಿಯ ಜನಪದ ಕಲೆಗಳಲ್ಲಿ ಹುಲಿವೇಷವೂ ಒಂದಾಗಿದೆ.ಕುಂದನಾಡಿನಲ್ಲಿ ಈ ಆಚರಣೆಯೂ ರೂಢಿಯಲ್ಲಿದೆ.ಸಾಮೂಹಿಕವಾಗಿ ಅಥವಾ ಏಕಾಂಗಿಯಾಗಿ ವಿಶಿಷ್ಟ ವೇಷವನ್ನು ಧರಿಸುವವರೂ ಇದ್ದಾರೆ.ಇದರಲ್ಲಿ ಸಾಂಪ್ರದಾಯಿಕ ಪೂಜೆ ಇರುತ್ತದೆ.ನವರಾತ್ರಿಯ ಸಮಯದಲ್ಲಿ ಎಳೆಯ ಹುಡುಗರಿಂದ ಹಿಡಿದು ನಲವತ್ತು ವಯಸ್ಸಿನವರೂ ಹುಲಿ ವೇಷವನ್ನು ಧರಿಸುತ್ತಾರೆ.ಒಂಭತ್ತು ದಿನದವರೆಗೆ ವೇಷವನ್ನು ಹಾಕುತ್ತಾರೆ.ಕೆಲವರು ಹರಕೆಯನ್ನು ಹೊತ್ತು ವೇಷ ಹಾಕುವವರು ಇರುತ್ತಾರೆ..ಇಡೀ ಮೈಗೆ ಬಣ್ಣ ಹಚ್ಚಿಕೊಂಡು ಹುಲಿ–ಬೇಟೆಗಾರ,ಕರಡಿ–ಬೇಟೆಗಾರ,ವಿವಿಧ ವೇಷವನ್ನು ಧರಿಸುತ್ತಾರೆ.ಬೆಸ ಸಂಖ್ಯೆಯಲ್ಲಿ ಕಲಾವಿದರು ಮತ್ತು ವಾದ್ಯದವರು ಇರುತ್ತಾರೆ.ಕೆಲವರು ಕಾಲಿಗೆ ಕೀಲು ಹಾಕಿಕೊಂಡು ಕುಣಿಯುವವರಿರುತ್ತಾರೆ.ಇನ್ನು ಬೇರೆ ಬೇರೆ ಸರ್ಕಸ್ ಮತ್ತು ಪಲ್ಟಿ ಹೊಡೆಯುವುದು ಕೂಡ ಮಾಡುತ್ತಾರೆ.

**ತುಳಸಿ ಪೂಜೆ:**ಪ್ರತಿ ವರ್ಷ ದೀಪಾವಳಿಯಿಂದ ಪ್ರಾರಂಭಿಸಿ ಉತ್ತರಾಣಕ್ಕೆ ಮುಂಚೆ ತುಳಸಿ ಪೂಜೆಯನ್ನು ಆಚರಿಸುತ್ತಾರೆ.ತಿರುಪತಿಗೆ ಹೋಗಿರುವ ಅಥವಾ ದೀಕ್ಷೆ ಪಡೆದುಕೊಂಡಿರುವ ವ್ಯಕ್ತಿಗಳು ಈ ಪೂಜೆಯನ್ನು ಮಾಡುತ್ತಾರೆ.ಕೆಲವು ಸಮುದಾಯದಲ್ಲಿ ದೀಪಾವಳಿಯ ದಿನದಂದೇ ಈ ಆಚರಣೆಯನ್ನು ಮಾಡುತ್ತಾ ತುಳಸಿ ಬರುತ್ತಾರೆ.ಬೆಟ್ಟದ ನೆಲ್ಲಿಗಿಡವನ್ನು ನೆಟ್ಟು ಪೂಜಿಸುವ ಪಟಾಕಿ ಹೊಡೆಯುವ ಆಚರಣೆಯನ್ನು ಮಾಡುವ ಸಂಪ್ರದಾಯವಿದೆ.ತುಳಸಿ ಕಟ್ಟೆಗೆ ಕಾಯಿ ಒಡೆದ ಎಲ್ಲಾ ಕುಟುಂಬಸ್ಥರು ಅವಲು(ಅವಲಕ್ಕಿ)ನೀರು ತುಳಸಿ ಕಟ್ಟೆಗೆ ಸ್ವಲ್ಪ ಬಿಟು ಉಳಿದ ಅವಲಕ್ಕಿಯನ್ನು ಪ್ರಸಾದವಾಗಿ ಸೇವಿಸುವುದನ್ನು ಮಾಡುತ್ತಾರೆ.ಸೇರಿ ದೀಪಾವಳಿ ಪಟಾಕಿ,ದೀಪದ ಸಂಭ್ರಮವು

ನೋಡಲು ಸುಂದರವಾಗಿರುತ್ತದೆ.ರಾತ್ರಿ ಹೊತ್ತಲ್ಲಿ ಈ ಪೂಜೆಯನ್ನು ನೆರವೇರಿಸುತ್ತಾರೆ.ಹಗಲಲ್ಲಿ ಪೂಜೆ ಸಲ್ಲುವುದಿಲ್ಲ.ಒಂದು ಕಳಸ,ಒಂದು ಕಾಲು ದೀಪವನ್ನುಬಳಸುತ್ತಾರೆ. ಪೂಜೆ ಆದ ಬಳಿಕ ಕಳಸವನ್ನು ನಡುಮನೆ ಒಳಗೆ ಇರಿಸಲಾಗುತ್ತದೆ.ಆ ಮನೆಯ ವಂಶದವರು ಆ ಕಳಸವನ್ನು ಮತ್ತು ದೀಪವನ್ನು ಹಿಡಿಯುತ್ತಾರೆ.

**ನಾಗಸಂಸ್ಕಾರ:**–ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿಶಿಷ್ಟ ಆಚರಣೆಯ ಪ್ರಕಾರ ಸತ್ತಿರುವ ನಾಗರ ಹಾವನ್ನು ನೋಡಿ ಹಾಗೆಯೇ ಹೋಗುವ ಹಾಗೆ ಇಲ್ಲ.ಸತ್ತಿರುವ ನಾಗರ ಹಾವಿನ ಮೃತ ದೇಹವನ್ನು ಯಾರು ಮೊದಲು ನೋಡುತ್ತಾರೋ ಅವರೇ ಅವರ ಶವ–ಸಂಸ್ಕಾರವನ್ನು ಮಾಡಬೇಕು.ಮೂರು ವರ್ಷದ ನಂತರ ತನ್ನ ಕುಟುಂಬ ಸಮೇತ ಸಂಸ್ಕಾರವನ್ನು ನೆರವೇರಿಸಬೇಕು.ಈ ವಿಧಿ–ವಿಧಾನವನ್ನು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾತ್ರ ಕಾಣಬಹುದು.

**ವಸಂತ ಪೂಜೆ:** ಕರಾವಳಿಯಲ್ಲಿ ತಿರುಪತಿ ದೇವರ ಭಕ್ತರ ಸಂಕೇತಿಕ ಆಚರಣೆಯೇ ವಸಂತ.ತಿರುಪತಿ,ಧರ್ಮಸ್ಥಳ,ಸುಬ್ರಮಣ್ಯ ದೇವರಿಗೆ ಕಾಣಿಕೆಯನ್ನು ತೆಗೆದಿಟ್ಟು,ಶಂಖ,ಜಾಗಟೆ ನಾದದಿಂದ ಹೂ,ತುಳಸಿದಳದಿಂದ ಅರ್ಚನೆ ಮಾಡುತ್ತಾರೆ.ಧೂಪ,ಆರತಿಯನ್ನು ನೆರವೇರಿಸುತ್ತಾರೆ.ಹಗಲು ಮತ್ತು ರಾತ್ರಿ ಎರಡು ಹೊತ್ತಲ್ಲಿ ವಸಂತವನ್ನು ಮಾಡುತ್ತಾರೆ.ಈ ಪೂಜೆಯನ್ನು ತಿರುಪತಿಗೆ ಹೋಗಿ ಅಲ್ಲಿ ಪೂಜೆ ಮಾಡಿದ ವ್ಯಕ್ತಿಯ ಪೂಜೆಯನ್ನು ದೇವರು ಸ್ವೀಕಾರ ಮಾಡುತ್ತಾನೆನ್ನುವ ನಂಬಿಕೆ ಇದೆ.ಸಿಯಾಳ,ಕಾಳು ಮೆಣಸು,ಒಣ ಶುಂಠಿ,ಬೆಲ್ಲದ ನೀರಿನ ಪಾನಿಯವನ್ನು ನೀಡುತ್ತಾರೆ.ಕಲ್ಲು ಸಕ್ಕರೆ,ಒಣದ್ರಾಕ್ಷಿ,ಹೆಸರು,ಎಲ್ಲಾ ಹಣ್ಣಿನ ಮಿಶ್ರಣ ಮಾಡಿದ ಪ್ರಸಾದವನ್ನು ತಯಾರಿಸುತ್ತಾರೆ.ತಿರುಪತಿಗೆ ಹೋದ ವ್ಯಕ್ತಿ ವೆಂಕಟರಮಣನ ವರ್ಣಿಸುವ ಪದ್ಯವನ್ನು ತಿಳಿದಿರಬೇಕು.ಪೂಜೆ ಮಾಡುವ ವ್ಯಕ್ತಿ ದೇವರನ್ನು ವರ್ಣಿಸುತ್ತಾ ಕೊನೆಯಲ್ಲಿ ಗೋವಿಂದ ಹೇಳುತ್ತಾನೆ.ಆಗ ಉಳಿದ ಭಕ್ತರು ಗೋವಿಂದ ಎಂದು ಗಟ್ಟಿಯಾಗಿ ಹೇಳುತ್ತಾರೆ.ಕೊನೆಗೆ ದೀಪ ಮತ್ತು ಕಳಸವನ್ನು ಒಳಗೆ ಇರಿಸಿ ಮಂಗಳಾರತಿಯನ್ನು ಮಾಡಲಾಗುತ್ತದೆ.

**ಜಕ್ಣಿ:**ತುಳುನಾಡಿನ ಇನ್ನೊಂದು ಮುಖದಂತೆ ಕುಂದ ಸಂಸ್ಕೃತಿ ವಿಭಿನ್ನವಾಗಿದೆ.ಕುಂದಾಪುರದ ಜನ ತನ್ನದೇ ಆದ ಉಪಸಂಸ್ಕೃತಿಯನ್ನು ಹೊಂದಿದೆ.ತುಳುನಾಡಿನ ಭೂತಾರಾಧನೆಯ ಜೊತೆಗೆ ಇಲ್ಲಿ ದೈವಾರಾಧನೆಯನ್ನು ಪ್ರತಿ ವರ್ಷವೂ ಆಚರಿಸಿಕೊಂಡು ಬರುತ್ತಿದ್ದಾರೆ.ಪ್ರತೀ ಕುಟುಂಬವೂ ಮೂಲಸ್ಥಾನದಲ್ಲಿ ನಡೆಯುವ ನೇಮಕ್ಕೆ ಬರಲೇ ಬೇಕೆನ್ನುವ ನಿಯಮವಿದೆ.ತನ್ನ ಪಾಲಿನದ್ದನ್ನು ಆತ ನೀಡಲೇಬೇಕು.ಕಲ್ಲುಕುಟಿಕ,ಪಂಜುರ್ಲಿ,ಹ್ಯಾಗುಳಿ,ನೀಚ,ಬೈಕಾಡ್ತಿ,ಮಲಸಾವರಿ,ಸ್ವಾಮಿ,ಮರ್ಲ್‌ಚಿಕ್ಕು, ಸನ್ಯಾಸಿ,ರಾಹು,ಕೋಳಿರಾಯ ಮುಂತಾದ ದೈವಗಳ ಪೂಜೆ ನಡೆಯುತ್ತದೆ.ಕುಟುಂಬದ ಪಾತ್ರಿ ಅಥವಾ ಹೊರಗಿನ ಪಾತ್ರಿಗಳು ಈ ದರ್ಶನವನ್ನು ನಡೆಸಿಕೊಡುತ್ತಾರೆ.ಬೋಗ,ಭೂತ,ಚಕ್ಣಿ ಮೊದಲಾದ ಹೆಸರಿನಿಂದ ಕರೆಯುತ್ತಾರೆ.ಆದರೆ ಜಕ್ಣಿ ಎಂದರೆ ಸತ್ತ ವ್ಯಕ್ತಿಯ ಆತ್ಮ ಎಂದರ್ಥ.ಆದರೆ ದೇವರ ಗಣಗಳು,ಪ್ರಾಣಿ ದೇವರು,ಕುಟುಂಬದ ಸದಸ್ಯ ಅಥವಾ ಹೊರಗಿನ ವ್ಯಕ್ತಿ ಸತ್ತು ಹೋಗಿ ದೈವತ್ವವನ್ನು ಪಡೆದುಕೊಳ್ಳುವುದು ಕೆಲವು ಕುಟುಂಬದಲ್ಲಿರುತ್ತದೆ.ಆ ಸತ್ತ ವ್ಯಕ್ತಿಯ ಆತ್ಮವು ಯಾವಾಗಲೂ ಕುಟುಂಬದ ಮತ್ತು ನಂಬಿದವರನ್ನು ಏಳ್ಗೆಗೆ ತುಡಿಯುತ್ತದೆ.ಕುಟುಂಬದ ಸದಸ್ಯರಿಗೆ ಏನೇ ಸಮಸ್ಯೆಗಳಾದರೂ ಆ ವ್ಯಕ್ತಿ ಕಾಪಾಡುತ್ತಾನೆನ್ನುವ ನಂಬಿಕೆ ಕುಟುಂಬದ ಸದಸ್ಯರಿಗೆ ಇದ್ದೇ ಇರುತ್ತದೆ.ಮಾಡುವಂತಹ ಸೇವೆ ಸರಿಯಾಗದಿದ್ದರೆ ಅಥವಾ ಪೂಜಾ ಕಾರ್ಯವನ್ನು ನಿಲ್ಲಿಸಿದರೆ ಅವನು ಕುಟುಂಬಸ್ಥರಿಗೆ ತೊಂದರೆ ಕೊಡಲು ಮುಂದಾಗುತ್ತಾನೆನ್ನುವ ನಂಬಿಕೆಯಿಂದ ಆ ಸತ್ತ ವ್ಯಕ್ತಿಯ ಆತ್ಮ ಸಂತೃಪ್ತಿ ಪಡಿಸುವ ಹಿನ್ನಲೆಯಲ್ಲಿ ಅವನಿಗೂ ಪೂಜೆ ಪುರಸ್ಕಾರ ದೊರೆಯುತ್ತದೆ.ಈ ಆಚರಣೆ ಪ್ರಚಲಿತದಲ್ಲಿರುವ ಕಾರಣ ಇದಕ್ಕೆ ಜಕ್ಣಿ ಎಂದು ಕರೆಯುತ್ತಾರೆ.ಅವನು ಯಾರಿಗೂ ತೊಂದರೆ ಕೊಡದೆ ಸದಾ ನಮಗೆ ಆಶೀರ್ವಾದ ಮಾಡಬೇಕೆನ್ನುವ ಇರಾದೆಯಿಂದ ವರ್ಷಕ್ಕೊಮ್ಮೆ ಆತನಿಗೆ ಕುಟುಂಬದ ದೈವಗಳೊಂದಿಗೆ ಭೂತವನ್ನು ನೆರವೇರಿಸುತ್ತಾರೆ.

**ಜನಪದ ಕ್ರೀಡೆ**:ಕುಂದಾಪುರದ ಮಣ್ಣಿನದೇ ಆಗಿರುವ ಕೆಲವು ಸಂಪ್ರದಾಯಿಕ ಕ್ರೀಡೆಗಳಿವೆ.ಗುಡ್ನ,ಕಲ್ಲಿನಿಂದ ಆಡುವ ಆಟ.ಚೆನ್ನೆಮಣೆ ಆಟ:ಮರದ ಕೊರಡನ್ನು ಮತ್ತು ಚೆನ್ನೆಕಾಯಿಯಿಂದ ಈ ಆಟವನ್ನು ಆಡುತ್ತಾರೆ.ಬಂಡಿಯಾಟ: ಚಕ್ರವನ್ನು ಬಳಸಿ ಆಡುವ ಆಟ.ಅಡಿಕೆ ಹಾಳೆಯಿಂದ ಎಳೆದುಕೊಂಡು ಹೋಗುವ ಆಟ.ಕೈ ಬೆರಳಿನಿಂದ ಒಟ್ಟೊಟ್ಟೆ ಜಾರಿ

ಆಟ,ಕಾಗದದ ಹಾಳೆಯಿಂದ ಕಳ್ಳ ಪೋಲಿಸ್ ಆಟ,ಉಪ್ಪಿನ ಮೂಟೆ ಬೆನ್ನಮೇಲೆ ಹೊತ್ತುಕೊಂಡು ಹೋಗುವ ಆಟ.ಕಣ್ಣಮುಚ್ಚಾಲೆ,ಟೊಪ್ಪಿಯ ಆಟ,ಕುಂಟೆ ಬಿಲ್ಲೆ,ಕೆರೆ–ದಡ,ಎತ್ತಿನ ಜೋಡಿನ ಆಟ,ಕುದುರೆಯಾಟ,ಚಿನ್ನದಾಂಡು,ಗೇರು ಬೀಜದಾಟ,ಗೋಲಿಯಾಟ: ಗುಂಪಾಗಿ ಅಥವಾ ಇಬ್ಬರು ಸೇರಿ ಆಡುವ ಆಟ,ಲಗೋರಿಯಾಟ: ಮಡಿಕೆ ಚೂರು–ಚೆಂಡನ್ನು ಬಳಸಿ ಆಡುವುದು.ಬುಗುರಿಯಾಟ,ನೀರಿನಲ್ಲಿ ಹೆಚ್ಚು ಹೊತ್ತು ಮುಳಿಗಿರುವ,ಈಜಿನ ಸ್ಪರ್ಧೆ,ನೀರಟ್ಟುವ ನೀರಿನ ಆಟವನ್ನು ಕೂಡ ತಿಳಿದಿದ್ದಾರೆ.ಆಟರತ್ತೋ ರತ್ತೋ ರಾಯರ ಮಗಳೆ ಎಂದು ಹಾಡುತ್ತಾ ಆಡುವ ಆಟ,ಗಣಪತಿ ಬಪ್ಪನ ಆಟ,ಮರಕೋತಿಯಾಟ,ಮಣ್ಣಿನಲ್ಲಿ ಕಡ್ಡಿಯನ್ನು ಹುದುಗಿಸುವ ಆಟ(ಹುಳುಕಡ್ಡಿಯಾಟ)ಹಿಡಿ ಕಡ್ಡಿಯನ್ನು ಕಟ್ಟಿನಿಂದ ನಿಧಾನವಾಗಿ ಬಿಡಿಸುವ ಆಟ,ತೊಟ್ಟಿಲಾಟ,ಚಿಕ್ಕ ಮಕ್ಕಳಿಗಾಗಿ ಚಾಕುರ್ ಆಟ,ಉಂಡಿ–ಗೆಂಡ್ಯಾಟ:ಮರದ ಗೋಲಾಕಾರದ ಚಂಡಿನಿಂದ ಒಂದು ಕೊಡೆಯಾಕಾರದ ಕೋಲಿನಿಂದ ಒಂದು ಗೆರೆಯಿಂದ ಇನ್ನೊಂದು ಗೆರೆಗೆ ಮುಟ್ಟಿಸುವ ಆಟ,ಮರದ ತುಂಡಿಗೆ ಚಕ್ರಗಳನ್ನು ಸಿಕ್ಕಿಸಿಕೊಂಡು ಎಳೆಯುವ ಆಟ,ಬಾಳೆಗಿಡದ ರಪ್ಪೆಯ ಪಟ್ ಪಟ್ ಆಟ,ಅದರ ದಿಂಡಿನಿಂದ ಗಾಡಿ ಮಾಡಿ ಎಳೆದುಕೊಂಡು ಹೋಗುವ ಆಟ, ತೆಂಗಿನ ಕಾಯಿ ಪಿಳ್ಳೆ ಮತ್ತು ಹಿಡಿಕಡ್ಡಿಯಿಂದ ತಯಾರಿಸಿದ ಸದ್ದನ್ನು ಮಾಡುವ ಆಟಿಕೆ ಹೀಗೆ ಹತ್ತು ಹಲವು ಆಧುನಿಕ ವಸ್ತುಗಳಿಲ್ಲದೆ ಆಟಗಳಿವೆ. ಸಮುದಾಯದ ಜೊತೆ ಸೇರಿ ಕಂಬಳ,ಕೋಳಿ ಪಡೆ ಮುಂತಾದ ಗ್ರಾಮೀಣ ಕ್ರೀಡೆಯನ್ನು ಈ ಭಾಗದವರು ತಿಳಿದಿದ್ದಾರೆ.

ಭಾರತೀಯ ಸಮಾಜದಲ್ಲಿ ಸಂಸ್ಕೃತಿಯು ದಿನದಿಂದ ದಿನಕ್ಕೆ ಬೆಳೆಯುತ್ತಿದೆ.ಇನ್ನು ಕೆಲವು ಸಂಸ್ಕೃತಿ ಅಂತ್ಯಗೊಂಡಿದೆ.ಒಂದು ಪ್ರದೇಶ ಹಲವು ಸಂಸ್ಕೃತಿಯನ್ನು ಒಳಗೊಂಡಿರುತ್ತದೆ.ಒಬ್ಬರ ಸಂಸ್ಕೃತಿಯ ಒಳಗಿರುವ ಸಂಸ್ಕಾರವನ್ನು ಅರ್ಥೈಸಿಕೊಂಡು ಮುನ್ನಡೆಯುವುದು ಮುಖ್ಯ ಇಲ್ಲಿ ಯಾರ ಸಂಸ್ಕೃತಿ ಮೇಲಲ್ಲ ಕೀಳೂ ಅಲ್ಲ.ಹೊಂದಿಕೊಂಡು ಹೋಗುವುದೇ ಮುಖ್ಯವಾಗಿದೆ.ಸಂಸ್ಕೃತಿಯನ್ನು ಆಚರಿಸುತ್ತಾ ಒಳಗಿರುವ ಸಂಸ್ಕಾರಗಳನ್ನು ಇಲ್ಲಿ ಬೆಳಗಬೇಕು.ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವ ಮತ್ತು ಒಗ್ಗಟ್ಟನ್ನು ಸಾರುವ ಸುಸಂಸ್ಕೃತಿಯನ್ನು ನಾವು ಎಲ್ಲಿಯೂ ತಡೆಯಿಲ್ಲದೆ ಆಚರಿಸುತ್ತಾ ಮುಂದಿನ ಪೀಳಿಗೆಗೆ ಸಂಸ್ಕೃತಿಯೆನ್ನುವ ಚಕ್ರವನ್ನು ಹೊರಳಿಸಬೇಕಾಗಿದೆ.

**ಪರಾಮರ್ಶನಾ ಗ್ರಂಥಗಳು**

1)ಜಾನಪದ ಶೋಧ:2015 ಎ.ವಿ.ನಾವಡ,ಪ್ರ:ಅಸ್ಮಿತೆ ಪ್ರಕಾಶನ ಮಂಗಳೂರು

2)ಕರಾವಳಿ ಜಾನಪದ: 2007 ಎ.ವಿ.ನಾವಡ,ಪ್ರ: ರೆಸಿಪ್ಸನ್ ಕಮಿಟಿ ಉಡುಪಿ

3) ಸಾಂಸ್ಕೃತಿಕ ಅಧ್ಯಯನ:2002 ರಹಮತ್ ತರೀಕರೆ, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು.

4)ನೋಟ್ಸ್ ಟುವರ್ಡ್ ಎ ಡೆಫಿನೇಶನ್ ಆಪ್ ಕಲ್ಚರ್:1949. ಟಿ.ಎಸ್.ಎಲಿಯಟ್,ಪ್ರ: ಯುನೈಟೆಡ್ ಸ್ಟೇಟ್ ಆಫ್ ಅಮೇರಿಕಾ

5)ವೆಸ್ಟರ್ನ್ ಕರ್ನಾಟಕ: ಡಾ.ಕೆ.ಜಿ.ವಸಂತ ಮಾಧವ. ಪ್ರ: ಶ್ರೀಮತಿ.ನಿರ್ಮಲ ಪಾಠ್, ನವರಂಗ್. 1991

6) ಪಾಣಾರಾಟ :ಎ.ವಿ.ನಾವಡ, 2014 ಪ್ರ: ಸಿ.ಎನ್.ಜಿ ಇಂಡಿಯಾ, ಬೆಂಗಳೂರು

7)ಜಾನಪದ ಸಮಾಲೋಚನೆ: ಎ.ವಿ.ನಾವಡ,1993 ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.

8)ಜಾನಪದ ಸ್ವರೂಪ: 1977 ಹಾಮಾ ನಾಯಕ್, ಪ್ರ: ಟಿ.ವಿ.ಮೆಮೋರಿಯಲ್ ಪಬ್ಲಿಕೇಶನ್ ಮೈಸೂರು

9)ದಿ ಸೆಂಟರ್ ಆಪ್ ಇಂಡಿಯನ್ ಕಲ್ಚರ್:' 1919. ರವೀಂದ್ರನಾಥ ಠಾಗೂರ್,ಪ್ರ: ವಿಶ್ವಭಾರತಿ ಪಬ್ಲಿಕೇಶನ್

10) ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು: 1979 ಸಂಪಾದಕರು ಡಾ.ಎನ್.ಆರ್.ನಾಯಕ, ಶ್ರೀಮತಿ ಶಾಂತಿ ನಾಯಕ, ಪ್ರ: ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ

11) ಕುಂದದರ್ಶನ: 1978 ಸಂ:ಎ.ವಿ.ನಾವಡ,ಪ್ರ: ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ.